ಹೇಳಿದನು. ಅವಳಿಗೆ ಎಲ್ಲ ಬಿಟ್ಟು ಈ ಸೈನಿಕನನ್ನು ನಾನು ಮದುವೆ ಆಗ್ಬೇಕಾ ಅಂತ ಬಹಳ ಸಿಟ್ಟು ಬಂತು. ಬಹಳ ರೋಷದಿಂದ ನನಗೆ ಮದುವೆನೂ ಬೇಡ ಏನೂ ಬೇಡ ಅಂತ ಅಲ್ಲಿದ್ದ ಉಳಿದ ಸೈನಿಕರಿಗೆ ಇವನಿಗೆ ಹೆಡೆಮುರಿ ಕಟ್ಟಿ ಇಲ್ಲೇ ಬಿಸಾಕಿ. ಬನ್ನಿ ನಾವು ವಾಪಸ್ಸು ಹೋಗೋಣ ಅಂತ ಹೇಳಿದಳು. ಸರಿ ಅವರೆಲ್ಲ ಈ ಸೈನಿಕನನ್ನು ಮುಳ್ಳು ಮತ್ತು ತಂತಿಗಳಿಂದೆಲ್ಲ ಕಟ್ಟುಹಾಕಿ ಅಲ್ಲೇ ಬಿಟ್ಟು ರಾಜಕುಮಾರಿ ಜೊತೆಗೆ ಹಿಂತಿರುಗಿ ರಾಜ್ಯಕ್ಕೆ ಹೋದರು.

ಆ ಸೈನಿಕನು ಅಲ್ಲೇ ನರಳುತ್ತ ಮಲಗಿರುವಾಗ ಅದೇ ದಾರಿಯಲ್ಲಿ ಹೋಗುತ್ತಿದ್ದ ಜನ ಬಂದು ಅವನ ಕಟ್ಟುಗಳನ್ನೆಲ್ಲ ಬಿಚ್ಚಿದರು. ಅವರು ಬೇರೆ ರಾಜ್ಯದ ಸೈನಿಕರೇ ಆಗಿದ್ದು ಪಕ್ಕದ ರಾಜ್ಯದ ರಾಜನ ಮೇಲೆ ಯುದ್ಧಕ್ಕೆ ಹೋಗುತ್ತಿದ್ದರು. ಇವನೂ ಒಬ್ಬ ಸೈನಿಕ ಅಂತ ಹೇಳಿದ್ದು ಕೇಳಿದ ಅವರು ಇವನಿಗೆ ಔಷಧೋಪಚಾರ ಮಾಡಿ ತಮ್ಮ ಜೊತೆ ಯುದ್ಧಕ್ಕೆ ಕರೆದೊಯ್ದರು.

ಆ ಸೈನಿಕರ ಜೊತೆ ಅವರ ರಾಜನೂ ಒಡಗೂಡಿ ಎಲ್ಲರೂ ಹುಮ್ಮಸ್ಸಿನಿಂದ ಯುದ್ಧ ಮಾಡಿ ಗೆದ್ದರು. ಈ ಸೈನಿಕನು ಯುದ್ಧದಲ್ಲಿ ಬಹಳ ಚೆನ್ನಾಗಿ ಹೋರಾಡಿದ್ದನು. ಆದರೆ ವಾಪಸ್ಸು ಬರುವಾಗ ಹೇಗೋ ಕೆಲವರು ಬೆನ್ನಟ್ಟಿ ಇವರ ರಾಜನನ್ನು ಕೊಂದುಬಿಟ್ಟರು. ಉಳಿದ ಸೈನಿಕರನ್ನೆಲ್ಲ ಇವನು ಹೋರಾಡಿ ಬದುಕಿಸಿ ವಿಜಯದೊಂದಿಗೆ ರಾಜ್ಯಕ್ಕೆ ಹಿಂದಿರುಗಿ ಬಂದನು. ಆಗ ಆ ಸೈನಿಕರೆಲ್ಲ ಇವನ ಶೂರತನಕ್ಕೆ ತಲೆಬಾಗಿ ಇವನಿಂದಾಗಿ ತಮಗೆ ಗೆಲುವು ಸಿಕ್ಕಿದೆ ಎಂದು ಇವನನ್ನೇ ರಾಜನನ್ನಾಗಿ ಮಾಡುತ್ತಾರೆ. ಸರಿ ಇವನು ಆ ರಾಜ್ಯದ ರಾಜನ ಪದವಿಗೇರುತ್ತಾನೆ.

ಹೀಗಿರುವಾಗ ಪಕ್ಕದ ರಾಜ್ಯಕ್ಕೆ ಯಾರೋ ಹೊಸ ಯುವಕ ರಾಜನಾಗಿ ಬಂದಿರುವ ಸುದ್ದಿ ತಿಳಿದ ರಾಜಕುಮಾರಿಯ ತಂದೆ ಇವನ ಫೋಟೊ ತರಿಸಿ ತೋರಿಸುತ್ತಾರೆ. ರಾಜಕುಮಾರಿಗೂ ಇಷ್ಟು ದಿನ ಆದರೂ ಯಾರೂ ಸಿಕ್ಕಿಲ್ಲವಲ್ಲ ಅಂತ ಬೇಸರವೂ ಆಗಿತ್ತು. ಅಲ್ಲದೆ ಆ ಸೈನಿಕನನ್ನು ನಾನು ಮದುವೆ ಆಗಬೇಕಿತ್ತಾ, ಅದರ ಬದಲು ಯಾರೋ ರಾಜಕುಮಾರ ಸಿಕ್ಕಿದ್ದಾನೆ ಹೇಗೂ ಸುಂದರವಾಗಿ ತೋರುತ್ತಾನೆ ಅಂತ ಹೆಚ್ಚು ಪರಾಮರ್ಶಿಸಲು ಹೋಗದೆ ಒಪ್ಪಿಕೊಂಡು ಮದುವೆ ಮಾಡಿಕೊಂಡು ಬಿಡುತ್ತಾಳೆ. ಈಗ ಹೇಳಿ, ಯಾವ ಯಾವ ಗಂಡಿಗೆ ಯಾವ ಹೆಣ್ಣು ಯಾವ ಹೆಣ್ಣಿಗೆ ಯಾವ ಗಂಡು ಸಿಗಬೇಕೆಂದು ಬ್ರಹ್ಮ ನಿಶ್ಚಯಿಸಿ ಗಂಟು ಹಾಕಿರುತ್ತಾನೆ ಎನ್ನುವ ಜನರ ಮಾತಿಗೂ ಆ ಸಾಧು ದಾರದಲ್ಲಿ ಹಾಕುತ್ತಿದ್ದ ಗಂಟಿಗೂ ಎಲ್ಲೋ ತಾಳೆ ಆಗುತ್ತದೆ. ಇದೇ ಕಾಣರಕ್ಕೆ ಲೋಕಾ ರೂಢಿಯಲ್ಲಿ ಮದುವೆ ಬಂಧವನ್ನು 'ಬ್ರಹ್ಮಗಂಟು' ಎನ್ನುತ್ತಾರೋ ಏನೋ ಅನ್ನಿಸುತ್ತದೆ.

# ಹೇಳಿ ನಾನು ಯಾರು?

**ರಾಜಶೇಖರ ಕುಕ್ಕುಂದಾ**
ಕಲೆ: ಸಂತೋಷ್ ಸಸಿಹಿತ್ಲು



ಪುಟು ಪುಟು ಪುಟು ಹೆಜ್ಜೆ ಹಾಕೋ
ಪಟ ಪಟ ಪಟ ಮಾತನಾಡೋ
ಪಿಳಿ ಪಿಳಿ ಪಿಳಿ ಕಣ್ಣು ಬಿಡೋ
ನಾನು ಯಾರು?
ಹೇಳಿ ನಾನು ಯಾರು?

ಸರ ಸರ ಸರ ಓಡಿ ಹೋಗೋ
ಗಿರಿ ಗಿರಿ ಗಿರಿ ಸುತ್ತು ಹಾಕೋ
ಹಿರಿ ಹಿರಿ ಹಿರಿ ಹಿಗ್ಗಿಬಿಡೋ
ನಾನು ಯಾರು?
ಹೇಳಿ ನಾನು ಯಾರು?

ಥಕ ಥಕ ಥಕ ಕುಣಿದುಬಿಡೋ
ಲಕ ಲಕ ಲಕ ಹೊಳೆದುಬಿಡೋ
ಕಲ ಕಲ ಕಲ ಸದ್ದು ಮಾಡೋ
ನಾನು ಯಾರು?
ಹೇಳಿ ನಾನು ಯಾರು?

ಅಲ್ಲಿ ಇದ್ದರಿಲ್ಲಿ ಇರುವ
ಇಲ್ಲಿ ಇದ್ದರಲ್ಲಿ ಇರುವ
ಗಾಳಿಯಂತೆ ತೋರಿಬರುವ
ಗೂಳಿಯಂತೆ ತೂರಿಬರುವ
ನಾನು ಯಾರು?
ಹೇಳಿ ನಾನು ಯಾರು?




ಕುಂಚ ಪ್ರಪಂಚ



**ದೀಕ್ಷಾ ಎಚ್.ಎಂ.**
9ನೇ ತರಗತಿ,
ಕೇಂದ್ರೀಯ ವಿದ್ಯಾಲಯ,
ಬಳ್ಳಾರಿ